## ಓದುಗರ ಪತ್ರಗಳು

# ನಗರಸಭೆ ಗಮನಿಸುವುದೇ?

ಮಾನ್ಯರೇ,

ತುಮಕೂರು ನಗರದ ಶೆಟ್ಟಿಹಳ್ಳಿ ರಸ್ತೆಯಲ್ಲಿರುವ ಹೆಚ್.ಎಂ.ಎಸ್. ಸಂಸ್ಥೆಯ ಮುಂದಕ್ಕೆ ಒಂದು ದೊಡ್ಡ ಆಲದ ಮರ ಇದೆ. ಈ ಮರ ಬಹಳ ಹಳೆಯದಾಗಿದ್ದು, ಇದರ ಬಿಳಿಲು ಬೇರುಗಳು ಬಹಳ ಕೆಳಗಿನ ವರೆಗೂ ಬಂದಿವೆ. ಈ ಮರದ ಬಳಿ ದತ್ತಾತ್ರೇಯ ದೇವಸ್ಥಾನಕ್ಕೆ ಹೋಗುವ ಅಡ್ಡರಸ್ತೆ ಇದೆ. ಈ ರಸ್ತೆಯ ಕಡೆಗೆ ವಾಹನಗಳು ತಿರುಗಿದಾಗ ಆಲದಮರದ ಬಿಳಿಲು ಬೇರುಗಳು ಬಡಿಯುವಂತಿದೆ. ನಗರಸಭೆಯವರು ಈ ಬಿಳಿಲು ಬೇರುಗಳನ್ನು ಕತ್ತರಿಸಿ, ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟರೆ, ಮುಂದೆ ಆಗಬಹುದಾದ ಅಪಘಾತಗಳು ತಪ್ಪಿದಂತಾಗುತ್ತದೆ.

**-ಜೆ.ಅನಂತರನಾರಾಯಣಸ್ವಾಮಿ,**
**ಅಶೋಕನಗರ, ತುಮಕೂರು.**